ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ

ದಿನಾಂಕ : DATE: 22/1/2021

ಆಡಳಿತದ ಚುರುಕಿಗೆ ಬಿಎಸ್‌ವೈ ಕ್ರಮ | ಕೆಲವರ ಖಾತೆ ಬದಲು, ಮುನಿದವರಿಗೆ ಸಮಾಧಾನ

# ಖಾತೆಗಳಿಗೆ ಆಪರೇಷನ್

**ವಿಕ ಸುದ್ದಿಲೋಕ** ಬೆಂಗಳೂರು 22/1/21

ನೂತನ ಸಚಿವರಿಗೆ ಖಾತೆ ಹಂಚಿಕೆ ಮಾಡಿರುವ ಸಿಎಂ ಬಿ.ಎಸ್.ಯಡಿಯೂರಪ್ಪ ಅವರು ಹಳಬರಲ್ಲಿ ಕೆಲವರ ಖಾತೆ ಬದಲಾಯಿಸುವ ಮೂಲಕ ಸಂಪುಟಕ್ಕೆ 'ಆಪರೇಷನ್' ಮಾಡಿದ್ದಾರೆ. ಇದರೊಂದಿಗೆ ಹಾಲಿ ಸರಕಾರ ಎರಡು ವರ್ಷ ಪೂರೈಸುವ ಮೊದಲು ಸಂಪುಟದ ಸದಸ್ಯರ ಜವಾಬ್ದಾರಿಯಲ್ಲಿ ಸಣ್ಣ ಪ್ರಮಾಣದ ಪುನರ್‌ರಚನೆ ಆದಂತಾಗಿದೆ.

ಸರಕಾರದ ವರ್ಚಸ್ಸು ಹೆಚ್ಚಿಸುವ ಹಾಗೂ ಆಡಳಿತ ಯಂತ್ರಕ್ಕೆ ಚುರುಕು ಮುಟ್ಟಿಸುವ ಭಾಗವಾಗಿ ಸಿಎಂ ಈ ಕ್ರಮ ಕೈಗೊಂಡಿದ್ದಾರೆ. ಸಿಎಂ ಅಪೇಕ್ಷೆಯಂತೆ ಸಂಪುಟ ವಿಸ್ತರಣೆಗೆ ಅನುಮತಿ ನೀಡಿದ್ದ ಬಿಜೆಪಿ ವರಿಷ್ಠರು ಖಾತೆ ಹಂಚಿಕೆಯಲ್ಲೂ ವಿವೇಚನಾಧಿಕಾರ ಬಳಸಲು ಅವಕಾಶ ಕೊಟ್ಟಿದ್ದರು. ಹಾಗಾಗಿ ಈ ಮೊದಲೇ ಸಚಿವರಾಗಿದ್ದವರ ಪೈಕಿ ಕೆಲವರ ಖಾತೆ ಬದಲಾವಣೆಯನ್ನೂ ಮಾಡಿದ್ದಾರೆ. ಈ ಪ್ರಕ್ರಿಯೆ ಬೆನ್ನಿಗೇ ಅಸಮಾಧಾನವೂ ಕೇಳಿ ಬಂದಿದೆ. ಇದನ್ನು ಪರಿಹರಿಸುವ ನಿಟ್ಟಿನಲ್ಲೂ ಸಿಎಂ ಮುತುವರ್ಜಿ ವಹಿಸಿದ್ದಾರೆ.

ಖಾತೆ ಹಂಚಿಕೆ ಸಂಬಂಧ ಶನಿವಾರ ರಾತ್ರಿಯೇ ರಾಜಭವನಕ್ಕೆ ಪಟ್ಟಿ ರವಾನೆಯಾಗಿತ್ತು. ಗುರುವಾರ ಬೆಳಗ್ಗೆ ರಾಜ್ಯಪಾಲರ ಅಂಕಿತದೊಂದಿಗೆ ಅಧಿಕೃತ ಪಟ್ಟಿ ಹೊರಬಿದ್ದಿತು. ಹೊಸ ಸಚಿವರಲ್ಲಿ ಎಂ.ಟಿ.ಬಿ.ನಾಗರಾಜ್ ಅಬಕಾರಿ ಖಾತೆ ವಹಿಸಿಕೊಳ್ಳಲು ನಿರಾಕರಿಸಿದ್ದಾರೆ. ಇದರ ಹೊರತಾಗಿ ಹೊಸಬರಲ್ಲಿ ಉಮೇಶ ಕತ್ತಿ, ಅರವಿಂದ ಲಿಂಬಾವಳಿ, ಎಸ್.ಅಂಗಾರ, ಮುರುಗೇಶ ನಿರಾಣಿ, ಸಿ.ಪಿ.ಯೋಗೇಶ್ವರ್, ಆರ್. ಶಂಕರ್ ತಕರಾರು ತೆಗೆದಿಲ್ಲ. ಆದರೆ, ಸಚಿವರಾದ ಜೆ.ಸಿ.ಮಾಧುಸ್ವಾಮಿ, ಕೆ.ಸಿ.ನಾರಾಯಣ ಗೌಡ, ಕೆ.ಗೋಪಾಲಯ್ಯ ಖಾತೆ ಬದಲಾಗಿದ್ದಕ್ಕೆ ಬೇಸರ ತೋಡಿಕೊಂಡಿದ್ದಾರೆ. ಡಾ. ಕೆ. ಸುಧಾಕರ್ ಅವರಿಗೆ ತಮ್ಮಿಂದ ವೈದ್ಯ ಶಿಕ್ಷಣ ಖಾತೆ ಹಿಂಪಡೆದಿದ್ದರಿಂದ ಬೇಸರ ತಂದಿದೆ ಎನ್ನಲಾಗಿದೆ.

ಖಾತೆ ಹಂಚಿಕೆ ವೇಳೆ ಸಣ್ಣಪುಟ್ಟ ವ್ಯತ್ಯಾಸ ಸಹಜ. ಯಾರಲ್ಲೂ ಅಸಮಾಧಾನವಿಲ್ಲ. ಸಚಿವರು ಈಗ ಕೊಟ್ಟ ಇಲಾಖೆಗಳಲ್ಲಿ ಚೆನ್ನಾಗಿ ಕೆಲಸ ಮಾಡಲಿ. ಮುಂದೆ ಬೇರೆ ಖಾತೆಯ ಅವಕಾಶ ಇದ್ದೇ ಇರುತ್ತದೆ.

**- ಬಿ.ಎಸ್.ಯಡಿಯೂರಪ್ಪ** ಸಿಎಂ



### ನೂತನ ಸಚಿವರ ಖಾತೆ

- ಉಮೇಶ ಕತ್ತಿ: ಆಹಾರ, ನಾಗರಿಕ ಪೂರೈಕೆ ಮತ್ತು ಗ್ರಾಹಕ ವ್ಯವಹಾರ
- ಎಸ್.ಅಂಗಾರ: ಮೀನುಗಾರಿಕೆ, ಬಂದರು, ಒಳನಾಡು ಸಾರಿಗೆ
- ಅರವಿಂದ ಲಿಂಬಾವಳಿ: ಅರಣ್ಯ
- ಮುರುಗೇಶ ನಿರಾಣಿ: ಗಣಿ ಮತ್ತು ಭೂವಿಜ್ಞಾನ
- ಎಂ.ಟಿ.ಬಿ.ನಾಗರಾಜ್: ಅಬಕಾರಿ
- ಸಿ.ಪಿ.ಯೋಗೇಶ್ವರ್: ಸಣ್ಣ ನೀರಾವರಿ
- ಆರ್.ಶಂಕರ್: ಪೌರಾಡಳಿತ ಮತ್ತು ರೇಷ್ಮೆ

ಎಂ.ಟಿ.ಬಿ.ನಾಗರಾಜ್ ಗುರುವಾರ ಬೆಳಗ್ಗೆಯೇ ಮುಖ್ಯಮಂತ್ರಿಯನ್ನು ಭೇಟಿಯಾಗಿ ಅತೃಪ್ತಿ ವ್ಯಕ್ತಪಡಿಸಿದರು. ಇದಲ್ಲದೆ ಎಂ.ಟಿ.ಬಿ.ನಾಗರಾಜ್, ಡಾ. ಕೆ. ಸುಧಾಕರ್, ಕೆ.ಗೋಪಾಲಯ್ಯ, ಕೆ.ಸಿ.ನಾರಾಯಣ ಗೌಡ ಪ್ರತ್ಯೇಕ ಸಭೆಯನ್ನೂ ನಡೆಸಿದರು. ಈ ಮಧ್ಯೆ ಮುಖ್ಯಮಂತ್ರಿಯವರು ತುಮಕೂರು ಪ್ರವಾಸದಿಂದ ವಾಪಸಾದ ಬಳಿಕ ಎಂ.ಟಿ.ಬಿ. ಮತ್ತಿತರರು ಪುನಃ ಭೇಟಿಯಾದರು. ಈ ಸಂದರ್ಭದಲ್ಲಿ ಸಚಿವರಿಗೆ ಮನವರಿಕೆ ಮಾಡುವ ಯತ್ನವನ್ನು ಸಿಎಂ ಮಾಡಿದ್ದಾರೆ.

ಎಂ.ಟಿ.ಬಿ.ನಾಗರಾಜ್, ಗೋಪಾಲಯ್ಯ ಅವರನ್ನು ಕರೆಸಿ ಆರ್. ಅಶೋಕ್ ಮತ್ತು ಬಸವರಾಜ ಬೊಮ್ಮಾಯಿ ಮಾತುಕತೆ ನಡೆಸಿದರು. ಸಿಎಂ ಅವರನ್ನೂ ಭೇಟಿ ಮಾಡಿಸಿದರು.

ಸಿಎಂ ಭೇಟಿ ಬಳಿಕವೂ ಅಬಕಾರಿ ಖಾತೆಯನ್ನು ಎಂ.ಟಿ.ಬಿ.ನಾಗರಾಜ್ ನಿರಾಕರಿಸಿದ್ದರಿಂದ ಅವರಿಗೆ ಬೇರೆ ಇಲಾಖೆ ನೀಡುವ ನಿರೀಕ್ಷೆಯಿದೆ. ಒಂದೆರಡು ದಿನದಲ್ಲಿ ಈ ಪ್ರಕ್ರಿಯೆ ನಡೆಯುವ ಸಾಧ್ಯತೆಯಿದೆ.

- **ಜೆ.ಸಿ.ಮಾಧುಸ್ವಾಮಿ:** ವೈದ್ಯ ಶಿಕ್ಷಣ, ಕನ್ನಡ ಮತ್ತು ಸಂಸ್ಕೃತಿ
- **ಸಿ.ಸಿ.ಪಾಟೀಲ್:** ಸಣ್ಣ ಕೈಗಾರಿಕೆ, ವಾರ್ತಾ, ಸಾರ್ವಜನಿಕ ಸಂಪರ್ಕ
- **ಆನಂದ್ ಸಿಂಗ್:** ಪ್ರವಾಸೋದ್ಯಮ, ಪರಿಸರ
- **ಕೆ.ಗೋಪಾಲಯ್ಯ:** ತೋಟಗಾರಿಕೆ ಮತ್ತು ಸಕ್ಕರೆ
- **ಕೆ.ಸಿ.ನಾರಾಯಣಗೌಡ:** ಯುವಜನ ಸಬಲೀಕರಣ, ಕ್ರೀಡೆ, ಹಜ್, ವಕ್ಫ್

- **ಬಸವರಾಜ ಬೊಮ್ಮಾಯಿ:** ಗೃಹ ಖಾತೆ ಜತೆಗೆ ಹೆಚ್ಚುವರಿಯಾಗಿ ಕಾನೂನು ಮತ್ತು ಸಂಸದೀಯ
- **ಕೋಟ ಶ್ರೀನಿವಾಸ ಪೂಜಾರಿ:** ಮುಜರಾಯಿ ಜತೆಗೆ ಹಿಂದುಳಿದ ವರ್ಗಗಳ ಕಲ್ಯಾಣ

- **ಡಾ. ಕೆ.ಸುಧಾಕರ್:** ಆರೋಗ್ಯ ಮತ್ತು ಕುಟುಂಬ ಕಲ್ಯಾಣ
- **ಪ್ರಭು ಚೌವ್ಹಾಣ್:** ಪಶು ಸಂಗೋಪನೆ
- **ಶಿವರಾಂ ಹೆಬ್ಬಾರ್:** ಕಾರ್ಮಿಕ